ಅ) ಈ ಬಗೆಗೆ ನೂತನ ರೂಪು ರೇಷ್ಮೆಗಳನ್ನು ರೂಪಿಸಲಾಗಿದೆಯೇ (ವಿವರ ನೀಡುವುದು)

ಇ) ಯಾವಾಗ ಈ ಪ್ರಕ್ರಿಯೆ ಪ್ರಾರಂಭವಾಗುತ್ತದೆ?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು) :

ಅ) ಬೆಂಬಲ ಬೆಲೆ ಯೋಜನೆ ಹಾಗೂ ಫ್ಲೋರ್ ಪ್ರೈಸ್ ಯೋಜನೆಯಡಿಯಲ್ಲಿ ಖರೀದಿಸಲಾಗುವ ಉತ್ಪನ್ನಗಳು-ಮೆಕ್ಕೆಜೋಳ, ರಾಗಿ, ಬಿಳಿಜೋಳ, ಸಜ್ಜೆ, ಎಣ್ಣೆ ಕಾಳುಗಳು, ದ್ವಿದಳ ಧಾನ್ಯಗಳು, ಆಲೂಗೆಡ್ಡೆ, ಉಂಡೆ ಕೊಬ್ಬರಿ, ಕೌಟು ಕೊಬ್ಬರಿ, ಒಣಮೆಣಸಿನಕಾಯಿ ಹಾಗೂ ಹತ್ತಿ.

ಆ) ರಾಜ್ಯ ಸರ್ಕಾರವು ಅಡಿಕೆ (ಚಾಲಿ -ಬಿಳಿ (ಹಲೆಯದು) ಮಾದರಿ) ಯನ್ನು ಮಾರುಕಟ್ಟೆ ಮಧ್ಯಪ್ರದೇಶ ಯೋಜನೆಯಡಿಯಲ್ಲಿ ಸೇರ್ಪಡೆ ಮಾಡಲು ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಕಳುಹಿಸಿಕೊಟ್ಟಿರುತ್ತದೆ.

ಇ) ಕೇಂದ್ರ ಸರ್ಕಾರವು ಅಡಿಕೆಯನ್ನು ಮಾರುಕಟ್ಟೆ ಮಧ್ಯಪ್ರದೇಶ ಯೋಜನೆಯಡಿಯಲ್ಲಿ ಸೇರ್ಪಡೆ ಮಾಡುವ ಪ್ರಸ್ತಾವನೆಗೆ ಅಂಗೀಕಾರವನ್ನು ನೀಡಿದಲ್ಲಿ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಜರುಗಿಸಲಾಗುವುದು.

ಕಾವೇರಿ ಜಲಾನಯನ ಪ್ರದೇಶದಲ್ಲಿ ಯೋಜನೆಗಳ ಅನುಷ್ಠಾನ

123(350) ಶ್ರೀ ಚಲುವರಾಯಸ್ವಾಮಿ ಎನ್.(ನಾಗಮಂಗಲ) ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಜಲಾನಯನ ವ್ಯಾಪ್ತಿಯಲ್ಲಿ ಬರುವ ಯೋಜನೆಗಳು ಎಷ್ಟು ಮುಕ್ತಾಯವಾಗಿದೆ ಮತ್ತು ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ: ಮತ್ತು ಬಾಕಿ ಇರುವ ಯೋಜನೆಗಳೆಷ್ಟು ಮತ್ತು ಬೇಕಾದ ಮೊತ್ತವೆಷ್ಟು.

ಆ) ನಾಗಮಂಗಲ ತಾಲ್ಲೂಕಿನ ಇದುವಾ ಕೆರೆಯಿಂದ, ಕೋಡಿಯ ಮುಖಾಂತರ ಬಹಳಷ್ಟು ನೀರು ಹರಿದು ಹೋಗುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆಯ ಬಂದಿದ್ದರೆ ಕೈಗೊಂಡ ಕ್ರಮವೇನು?

ಇ) ಇದುವಾ ಕೆರೆಯ ಕೋಡಿಯಿಂದ ಹರಿದು ಹೋಗುತ್ತಿರುವ ನೀರನ್ನು ದೇವಲಾಪುರದ ಕೆರೆಗೆ ನೀರು ಸರಬರಾಜು ಮಾಡುವ ವಿಷಯ ಇಲಾಖೆಯ ಗಮನಕ್ಕೆ ಬಂದಿದೆಯೇ ಬಂದಿದ್ದರೆ ಕೈಗೊಳ್ಳುವ ಕ್ರಮವೇನು?

ಶ್ರೀ ಎಚ್.ಕೆ. ಪಾಟೀಲ್ (ನಾಗಮಂಗಲ) (ಜಲ ಸಂಪನ್ಮೂಲ ಸಚಿವರು):

ಅ) ಕಾವೇರಿ ಜಲಾನಯನ ವ್ಯಾಪ್ತಿಯಲ್ಲಿ ಮುಕ್ತಾಯಗೊಂಡಿರುವ ಹಾಗೂ ಪ್ರಗತಿಯಲ್ಲಿರುವ ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿರುತ್ತದೆ.

ಆ) ಈಗಾಗಲೇ ಹಿಡುವಾ ಕೆರೆಯ ಕೋಡಿಯಿಂದ ಹರಿದು ಹೋಗುವ ನೀರನ್ನು ರಾಮೇನಹಳ್ಳಿ ಬಳಿ ಪಿಕಪ್ ನಿರ್ಮಿಸಿದ್ದು, ಸುಮಾರು 270 ಎಕರೆ ಭೂಮಿಗೆ ನೀರನ್ನು ನೀಡಲಾಗುತ್ತದೆ ಈ ಪಿಕಪ್ ನಾಲೆಯನ್ನು ದುರಸ್ತಿ ಪಡಿಸಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.

೫) ಹಿಡುವಾ ಕೆರೆಯ ಕೋಡಿಯಿಂದ ಹರಿದು ಹೋಗುವ ನೀರನ್ನು ದೇವಲಾಪುರ ಕೆರೆಗೆ ಸೇರಿಸಲು ಈಗಾಗಲೇ ಫೀಡರ್ ನಾಲೆಯನ್ನು ನಿರ್ಮಿಸಿದ್ದು, ಈ ನಾಲೆಯಿಂದ ನೀರನ್ನು ಹರಿಸಲು ಕ್ರಮ ಜರುಗಿಸಲಾಗುವುದು.

ಅನುಬಂಧ

ಕಾವೇರಿ ಕೊಳ್ಳದಲ್ಲಿನ ಮುಕ್ತಾಯಗೊಂಡಿರುವ ಯೋಜನೆಗಳು:-

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಯ ಹೆಸರು	ಮಾರ್ಚ್-02ರ ಅಂತ್ಯಕ್ಕೆ ಒಟ್ಟು ವೆಚ್ಚ
1	ಕೆ.ಆರ್. ಸಾಗರ	693.00
2	ನುಗು	315.00
3	ಚಿಕ್ಕಹೊಳೆ	424.00
4	ಗುಂಡಾಲ್	452.00
5	ಹೆಬ್ಬಳ್ಳ	54.00
6	ಕಣ್ವ	35.00
7	ಮಂಗಳ	60.00
8	ಮಾರ್ಕೋನಹಳ್ಳಿ	35.00
9	ನಲ್ಲೂರು ಅಮಾನಿಕೆರೆ	517.00
10	ಸುವರ್ಣಾವತಿ	381.00
11	ಭೈರಮಂಗಲ	25.00

ಕಾವೇರಿ ಕೊಳ್ಳದಲ್ಲಿನ ಪ್ರಗತಿಯಲ್ಲಿರುವ ಯೋಜನೆಗಳು:-

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆಯ ಹೆಸರು	ಮಾರ್ಚ್-02ರ ಅಂತ್ಯಕ್ಕೆ ಒಟ್ಟು ವೆಚ್ಚ	ಬೇಕಾಗಿರುವ ಮೊತ್ತ
1	ಅರ್ಕಾವತಿ	7244.45	3755.55
2	ಚಿಕ್ಕಹೊಳೆ	1740.71	59.29
3	ಇಗ್ಗಲೂರು	4932.51	2032.49
4	ಮಂಚನಬೆಲೆ	6884.70	580.30

5	ತಾರಕ	2913.71	2186.29
6	ಉಡುತೊರೆಹಳ್ಳ	12722.55	2887.45
7	ಪೊಟಿಹೊಳೆ	4119.26	645.74
8	ಡಿ.ಡಿ. ಅರಸ್ ಕಾಲುವೆ	27048.00	5552.00
9	ಹಾರಂಗಿ	32106.29	5193.71
10	ಹೇಮಾವತಿ	161099.51	209900.49
11	ಕಬಿನಿ	38824.59	84475.41
12	ಕೆ.ಆರ್.ಎಸ್. ಆಧುನೀಕರಣ	27545.78	7454.22
13	ಯಗಚಿ	13602.12	16647.88
14	ಹುಚ್ಚನಕೊಪ್ಪಲು ಏತ ನೀರಾವರಿ	1465.39	1284.61
15	ಕಾಮಸಮುದ್ರ ಏತ ನೀರಾವರಿ	1962.68	737.32
16	ನಂಜಾಪುರ ಏತ ನೀರಾವರಿ	563.00	2597.00

ಎ.ಎಲ್. ಜಗದೀಶ್

ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2),
ಜಲಸಂಪನ್ಮೂಲ ಇಲಾಖೆ.

ನಾಗಮಂಗಲ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳ ಪ್ರಾರಂಭ

124(354) ಶ್ರೀ ಚಲುವರಾಯ ಸ್ವಾಮಿ ಎನ್.(ನಾಗಮಂಗಲ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನಲ್ಲಿ ಅಂಗನವಾಡಿ (ಹೊಸ) ತೆರೆಯಲು ಸರ್ಕಾರದಲ್ಲಿ ಪ್ರಸ್ತಾವನೆ ಇದೆಯೋ?

ಆ) ನಾಗಮಂಗಲ ತಾಲ್ಲೂಕಿನ ಮಂಜೂರಾಗಿರುವ ಅಂಗನವಾಡಿ ಕೇಂದ್ರದ ಕಟ್ಟಡವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಇ) ನಾಗಮಂಗಲ ತಾಲ್ಲೂಕಿನಲ್ಲಿ ಕೆಲವು ಅಂಗನವಾಡಿ ಕೇಂದ್ರಗಳು ಸರಿಯಾದ ರೀತಿಯಲ್ಲಿ ನಡೆಯದಿರುವುದು ಹಾಗೂ ವಸ್ತುಗಳ ಸರಬರಾಜು ವಿಷಯದಲ್ಲಿ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೆ ಇದುವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ನಾಗಮಂಗಲ ತಾಲ್ಲೂಕಿನಲ್ಲಿ ಅಂಗನವಾಡಿ (ಹೊಸ) ತೆರೆಯಲು ಕೇಂದ್ರ ಸರ್ಕಾರದಲ್ಲಿ ಪ್ರಸ್ತಾವನೆ ಇದೆ.